ಅ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಸಚಿವರು):

ಅ) ಯಾವುದೇ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿರಾ ತಾಲ್ಲೂಕಿನಲ್ಲಿ ರಾಜಧನ ಸಂಗ್ರಹಿಸದೆ ಇರುವುದು

3682 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿರಾ ತಾಲ್ಲೂಕಿನಲ್ಲಿ ತೆಗೆಯಲಾದ ಮರಳು ಮತ್ತು ಕಟ್ಟಡದ ಕಲ್ಲು ಮುಂತಾದುವುಗಳಿಂದ ಸಂಗ್ರಹಿಸಿದ ರಾಜಧನದ ಮೊತ್ತವೆಷ್ಟು?

ಆ) ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ಶಿರಾ ತಾಲ್ಲೂಕಿನಲ್ಲಿ ನಡೆಯುತ್ತಿರುವ ಉಪ ಖನಿಜಗಳ ಕಳ್ಳ ಸಾಗಾಣೆಯನ್ನು ತಡೆಯುವಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):

ಅ) 1989ನೇ ಇಸವಿಯಲ್ಲಿ 4002-00 ಮತ್ತು 1990ನೇ ಇಸವಿಯಲ್ಲಿ 9167-00 ರೂ ರಾಜಧನವು 2 ಕಟ್ಟಡದ ಕಲ್ಲು ಹಾಗೂ ಒಂದು ಸಾದಾ ಮರಳಿನ ಕಲ್ಲು ಗಣಿ ಗುತ್ತಿಗೆಗಳಿಂದ ಸಂದಾಯವಾಗಿರುತ್ತದೆ.

ಆ) ಇಲ್ಲ.

ಬೈಂದೂರು ಕ್ಷೇತ್ರದ ವೈದ್ಯರ ಹುದ್ದೆ ಖಾಲಿ

3687 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಕ್ಷೇತ್ರದ ಕೊಲ್ಲೂರು ಹಳ್ಳಿಹೊಳೆ ಹಕ್ಲಾಡಿ ಆಸ್ಪತ್ರೆಗಳಲ್ಲಿ ಬಹುಕಾಲದಿಂದ ವೈದ್ಯಾಧಿಕಾರಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಗ್ರಾಮೀಣ ಪ್ರದೇಶದ ಕೆಲವು ಆಸ್ಪತ್ರೆಗಳಲ್ಲಿ ಒಂದಕ್ಕಿಂತ ಹೆಚ್ಚು ವೈದ್ಯರಿದ್ದಲ್ಲಿ ವೈದ್ಯರೆ ಇಲ್ಲದ ಕಡೆಗೆ ವರ್ಗಾಯಿಸಲಾಗುವುದೆಂದು ಹಿಂದೆ ತಿಳಿಸಿದ್ದರೂ ಅದನ್ನು ಕಾರ್ಯಗತ ಗೊಳಿಸದಿರಲು ಕಾರಣವೇನು?

ಇ) ವೈದ್ಯರ ನೇಮಕಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದ್ದು ಕೊಲ್ಲೂರು ಹಳ್ಳಿಹೊಳೆ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಿಸಲಾಗಿದೆ. ಹಕ್ಲಾಡಿ ಆಸ್ಪತ್ರೆಯಲ್ಲಿನ ಹುದ್ದೆ 3ನೇ ದರ್ಜೆ ವೈದ್ಯರ ಹುದ್ದೆಯಾಗಿದ್ದು ಖಾಲಿ ಇದೆ.

ಆ) ವೈದ್ಯರು ಇಲ್ಲದಿರುವ ಆಸ್ಪತ್ರೆಗಳಿಗೆ ಹತ್ತಿರದ ಆಸ್ಪತ್ರೆಯ ವೈದ್ಯರನ್ನು ಹೆಚ್ಚಿನ ಪ್ರಭಾವದಲ್ಲಿದ್ದು ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.